ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಬಸವನ-ಬಾಗೇವಾಡಿ

ಅಸಲು ದಾವಾ ಸಂ.**122/2014**
ವಾ.ಸಾ-**1**

ಪಾಟೀ ಸವಾಲು ಶ್ರೀ ಬಿ ಕೆ ಕೆ **1** ಮತ್ತು **2** ನೇ ಪ್ರತಿವಾದಿಯರ ಪರ ವಕೀಲರಿಂದ ಸಾಕ್ಷಿಗೆ ದಿನಾಂಕ **05.09.2019** ರಂದು ಪ್ರಮಾಣ ವಚನ ಬೋಧಿಸಲಾಯಿತು.

1. ದಾವೆ ಸಲ್ಲಿಸಲು ನಾನೇ ಮಾಹಿತಿ ಕೊಟ್ಟಿದ್ದೇನೆ. ಸಾಕ್ಷ್ಯ ಪ್ರಮಾಣ ಪತ್ರ ಬರೆಯಲು ಕೂಡಾ ನಾನೇ ಮಾಹಿತಿ ಕೊಟ್ಟಿದ್ದೇನೆ . ನಾನು ತೆಲಗಿ ಗ್ರಾಮದ ಖಾಯಂ ನಿವಾಸಿ ಎಂದು ತೋರಿಸಲು ಯಾವುದೇ ಕಾಗದ ಪತ್ರಗಳನ್ನು ಹಾಜರು ಪಡಿಸಿಲ್ಲ . ದಾವಾ ಜಮೀನು ಮೋಜಣಿ ಸಂಖ್ಯೆ 253. ಸದರಿ ಜಮೀನು ನಮ್ಮ ಹಿರಿಯರ ಆಸ್ತಿ ಅಲ್ಲ ಎಂದರೆ ಸರಿ. ಸದರಿ ಜಮೀನನ್ನು ಪೂರ್ವಿ ಮಾಲೀಕರಾದ ಬೋರವ್ವ ಗಂಡ ಭೀಮರಾಯಪ್ಪ ಭಾವಸಗೋಳ ಎಂಬುವವರಿಂದ ಖರೀದಿಸಿದೆ . ಸದರಿ ಆಸ್ತಿಯನ್ನು 1996 ರಲ್ಲಿ ಖರೀದಿಸಲಾಗಿದೆ. ಸದರಿ ಬೋರವ್ವನವರು ಬೇನಾಳ ಗ್ರಾಮದಲ್ಲಿ ವಾಸವಿರುತ್ತಿದ್ದರು ಎಂದರೆ ಸರಿಯಲ್ಲ. ಸದರಿಯವರು ತೆಲಗಿ ಗ್ರಾಮದದಲ್ಲಿ ವಾಸವಿರುತ್ತಿದ್ದರು. ಸದರಿಯವರು ತೆಲಗಿ ಗ್ರಾಮದಲ್ಲಿ ವಾಸವಿರುತ್ತಿದ್ದರು ಎಂದು ತೋರಿಸಲು ಯಾವುದೇ ದಾಖಲಾತಿಗಳನ್ನು ಹಾಜುರುಪಡಿಸಿಲ್ಲ.

2. ಜಮೀನು ಮೋಜಣಿ ಸಂಖ್ಯೆ 253 ರ ಉತ್ತರಕ್ಕೆ ಸರ್ವೇ ನಂ.254 ಜಮೀನ ಇದೆ. ಸದರಿ ಜಮೀನಿನಲ್ಲಿ ಮೂರು ಪಟ್ಟಿಗಳಾಗಿವೆ. ಸರ್ವೇ ನಂ.254 ರ ದಕ್ಷಿಣ ದಿಕ್ಕಿಗೆ ಒಡ್ಡು ಇದೆ ಎಂದರೆ ಸರಿ. ಸದರಿ ಒಡ್ಡನ್ನು ಬಶಟ್ಟಿ ಎಂಬುವವರು ಹಾಕಿದ್ದಾರೆ ಎಂದರೆ ಸಾಕ್ಷಿಯು ಸದರಿಯವರು ಅರ್ಧ ಒಡ್ಡನ್ನು ಹಾಕಿಸಿದ್ದಾರೆ ಎಂದು ನುಡಿಯುವರು.

3. 2001 ರಲ್ಲಿ ನಾನು ಹಂಡಗಿಯವರು ವಿರುದ್ಧ ದಾವೆ ಹೂಡಿದ್ದೆ ಎಂದರೆ ಸರಿ. ಸದರಿ ದಾವೆಯ ಕಾಲಕ್ಕೆ ಹಂಡಗಿಯವರು ತಮ್ಮ ಜಮೀನಿನ ಒಡ್ಡಿನ ಒಳಗೆಯೇ ಇನ್ನೊಂದು ಒಡ್ಡನ್ನು ಹಾಕಿಕೊಂಡಿದ್ದರು ಎಂದರೆ ಸರಿಯಲ್ಲ. ಈ ಕುರಿತು ನಾನು ದಾವೆ ನಡೆಸಿಲ್ಲ. ಸಾಕ್ಷಿಯು ಮುಂದುವರೆದು ಸದರಿಯವರು ರಾಜಿಯಾಗುವುದಾಗಿ ಹೇಳಿದ್ದರಿಂದ ನಾನು ದಾವೆಯನ್ನು ಮುಂದುವರೆಸಲಿಲ್ಲ ಎಂದು ನುಡಿಯುವರು. ಈ ಕುರಿತು ನಾವು ಯಾವುದೇ ರಾಜಿ ಅರ್ಜಿಗಳನ್ನು ದಾವೆಯಲ್ಲಿ ಸಲ್ಲಿಸಿಲ್ಲ. ಹಂಡರಗಿಯವರು ತಮ್ಮ ಜಮೀನಿನಲ್ಲಿಯೇ ಒಡ್ಡನ್ನು ಹಾಕಿಕೊಂಡಿದ್ದರಿಂದ ನಾನು ದಾವೆ ಮುಂದುವರೆಸಲಿಲ್ಲ ಎಂದರೆ ಸರಿಯಲ್ಲ. ಈ ಕುರಿತು ನಾನು ಈಗ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

4. ಈ ದಾವೆಯಲ್ಲಿ ನಾನು ನಮ್ಮ ಮತ್ತು ಪ್ರತಿವಾದಿಯರ ಜಮೀನುಗಳ ಅಳತೆಯ ಕುರಿತು ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ. ಪ್ರತಿವಾದ ಪತ್ರದಲ್ಲಿ ನಮೂದಿಸಿರುವ "ಎ ಬಿ ಸಿ ಡಿ" ರಸ್ತೆಯು ಸರ್ಕಾರಿ ರಸ್ತೆಯೆಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಸದರಿ ರಸ್ತೆ ನಮ್ಮ ಜಮೀನಿನಲ್ಲಿ ಇಲ್ಲ ಎಂದು ನುಡಿಯುವರು. ಸದರಿ ರಸ್ತೆ ಸರ್ವೇ ನಂ.254 ಜಮೀನಿನ ದಕ್ಷಿಣ ದಿಕ್ಕಿನಲ್ಲಿ ಸದರಿಯವರು ಬಿಟ್ಟಿರುವ ಕ್ಷೇತ್ರದಲ್ಲಿ ಹಾಯ್ದು ಹೋಗುತ್ತದೆ ಎಂದರೆ ಸಾಕ್ಷಿಯು ರಸ್ತೆ ಈಗ ಬಂದ ಮಾಡಲಾಗಿದೆ ಈ ಮೊದಲು ರಸ್ತೆ ಇತ್ತು ಎಂದು ನುಡಿಯುವರು. ಸದರಿ ರಸ್ತೆಯನ್ನು ನಾವೇ ಬಂದ ಮಾಡಿದ್ದೇವೆ ಎಂದರೆ ಸರಿಯಲ್ಲ. ಪ್ರತಿವಾದಿಯರು ತಮ್ಮ ಜಮೀನಿಗೆ "ಎ ಬಿ ಸಿ ಡಿ" ರಸ್ತೆಯ ಮೂಲಕವೇ ಹಾಯ್ದು ಹೋಗುತ್ತಾರೆ ಎಂದರೆ ಸರಿಯಲ್ಲ. ಸದರಿ ರಸ್ತೆಯು ಸರ್ಕಾರಿ ರಸ್ತೆಯಾದ್ದರಿಂದ 1 ಮತ್ತು 2 ನೇ ಪ್ರತಿವಾದಿಯರು ಮೂರನೇ ಪ್ರತಿವಾದಿಗೆ ಅರ್ಜಿ ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ.

5. ದಿನಾಂಕ 11-11-2013 ರಂದು 3 ನೇ ಪ್ರತಿವಾದಿಯ ಕಾರ್ಯಾಲಯದಿಂದ ನನಗೆ ನೋಟಿಸ ಕೊಟ್ಟಿದ್ದಾರೆ ಎಂದರೆ ಸರಿ. ದಿನಾಂಕ 19-11-2013 ರಂದು 3 ನೇ ಪ್ರತಿವಾದಿಯು ಸ್ಥಾನಿಕ ಪರಿಶೀಲನೆ ಮಾಡಿದ್ದರು ಎಂದರೆ ಸರಿಯಲ್ಲ. ಸದರಿ ಕಾಲಕ್ಕೆ ಕಂದಾಯ ಅಧಿಕಾರಿಗಳು ಪಂಚರ ಸಮಕ್ಷಮ ದಾವಾ ದಾರಿಯ ಕುರಿತು ಪರಿಶೀಲನೆ

ಮಾಡಿದ್ದಾರೆ ಎಂದರೆ ಸರಿಯಲ್ಲ.ಸದರಿ ಕಂದಾಯ ಅಧಿಕಾರಿಗಳು 3 ನೇ ಪ್ರತಿವಾದಿಗೆ ದಾವಾ ದಾರಿಯನ್ನು ಬಂದ ಮಾಡಿರುವ ಬಗ್ಗೆ ವರತಿ ಸಲ್ಲಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಈ ಕುರಿತು 3 ನೇ ಪ್ರತಿವಾದಿಯ ಕಾರ್ಯಾಲಯದಲ್ಲಿ NCR/CR/11/2013-14 ರಂತೆ ಪ್ರಕರಣ ದಾಖಲಾಗಿರುತ್ತದೆ ಎಂದರೆ ಸರಿ. ಸದರಿ ಪ್ರಕರಣದಲ್ಲಿ ರಸ್ತೆ ತೆರವು ಮಾಡಿಕೊಡುವಂತೆ ನಮ್ಮ ವಿರುದ್ಧ ಆದೇಶವಾಗಿರುತ್ತದೆ ಎಂದರೆ ಗೊತ್ತಿಲ್ಲ.

ಈ ಹಂತದಲ್ಲಿ ಸಾಕ್ಷಿಯ ಮುಂದುವರೆದ ಪಾಟೀ ಸವಾಲಿಗಾಗಿ ವಕೀಲರು ಸಮಾಯಾವಕಾಶ ಕೋರಿದ್ದರಿಂದ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಅದೆ.

ನನ್ನ ಸಮಕ್ಷಮ

ಹೆಚ್ಚುವರಿ ಸಿವ್ಹಿಲ್ ನ್ಯಾಯಾಧೀಶರು
ಬಸವನ ಬಾಗೇವಾಡಿ.

**<u>Cross examination by Sri.       Counsel for the Defendant.</u>**